# ‘ಆಕೆ’ ಬರುವಳೆಂದು..

**ಕೆ.ಎಂ. ಚೈತನ್ಯ ನಿರ್ದೇಶನದ ‘ಆಕೆ’ ತೆರೆಗೆ ಸಿದ್ಧವಾಗಿದೆ. ವಿದೇಶಿ ತಂತ್ರಜ್ಞರು ಭಾಗಿಯಾಗಿರುವ ಈ ಸಿನಿಮಾ ಪ್ರೇಕ್ಷಕರಲ್ಲಿ ಕಂಪನಗಳನ್ನು ಉಂಟು ಮಾಡುವ ತವಕದಲ್ಲಿದೆ.**



ಬದುಕಿನ ಚೆಲುವನ್ನು ಹೆಚ್ಚಿಸಬೇಕಿದ್ದ ಸಂಗಾತಿ ದೂರವಾಗಿದ್ದಾನೆ. ಬದುಕಿನ ಬಗ್ಗೆ ಭರವಸೆ ಕಡಿದುಕೊಳ್ಳದಿರಲು ಆಕೆಯ ಜೊತೆಗೊಂದು ಪುಟ್ಟ ಮಗುವಿದೆ. ನೆನಪುಗಳ ಕಣ್ಣಾಮುಚ್ಚಾಲೆ, ಬದುಕನ್ನು ಹಣ್ಣುಮಾಡುವ ಒಂಟಿತನ, ಪುಟ್ಟ ಕೂಸಿನ ಜವಾಬ್ದಾರಿ – ಹೆಣ್ಣೊಬ್ಬಳು ದಣಿಯಲು, ಖಿನ್ನಳಾಗಲು ಇನ್ನೇನು ಬೇಕು! ಇಂಥದೊಂದು ಅತಂತ್ರ ಹೆಣ್ಣುಮಗಳ ಬದುಕಿನ ಪಾತ್ರವನ್ನು ಶರ್ಮಿಳಾ ಮಾಂಡ್ರೆ ನಿರ್ವಹಿಸಿದ್ದಾರೆ. ‘ಆಕೆ’ ಎಂದರೆ ಅವರ ಕಣ್ಣುಗಳಲ್ಲಿ ಮಿಂಚುಗೊಂಚಲು.



ಶರ್ಮಿಳಾ ಅವರಿಗೆ ಈವರೆಗೆ ಸಿಕ್ಕಿರುವುದರಲ್ಲಿ ಅವರ ಗ್ಲಾಮರನ್ನು ನೆಚ್ಚಿಕೊಂಡ ಪಾತ್ರಗಳೇ ಹೆಚ್ಚು. ‘ಕಣ್ ಕಣ್ಣ ಸಲಿಗೆ’ ಎಂದು ನಾಯಕನೊಂದಿಗೆ ಡುಯೆಟ್ ಹಾಡುವ ಪಾತ್ರಗಳಲ್ಲಿ ಅವರು ಸಾಕಷ್ಟು ಕಾಣಿಸಿಕೊಂಡಿದ್ದಾರೆ. ಇದೇ ಮೊದಲ ಬಾರಿಗೆ ಅವರ ಕಣ್ಣುಗಳಲ್ಲಿ ರಮ್ಯ ಭಾವನೆಗಳ ಬದಲು ಆತಂಕ ಇಣುಕುತ್ತಿದೆ. ಮುಖದಲ್ಲಿ ಪ್ರೇಮಪುಷ್ಪ ಅರಳುವ ಬದಲು, ತಾಯ್ತನದ ಕದಲಿಕೆಗಳು ಕಾಣಿಸುತ್ತಿವೆ.

‘ಆಕೆ’ ನನ್ನ ವೃತ್ತಿಜೀವನದ ಮಹತ್ವಾಕಾಂಕ್ಷೆಯ ಸಿನಿಮಾ ಎಂದು ಹೇಳಲು ಶರ್ಮಿಳಾ ಅವರಿಗೆ ಹಿಂಜರಿಕೆಯಿಲ್ಲ. ಅಷ್ಟುಮಾತ್ರವಲ್ಲ, ದೆವ್ವದ ಕಥನದ ಚಿತ್ರವೊಂದರಲ್ಲಿ ನಟಿಸಬೇಕೆನ್ನುವ ಅವರ ಆಸೆಯೂ ‘ಆಕೆ’ ಮೂಲಕ ನನಸಾಗಿದೆ.

ಕೆ.ಎಂ. ಚೈತನ್ಯ ‘ಆಕೆ’ ಚಿತ್ರದ ನಿರ್ದೇಶಕರು. ಚೈತನ್ಯ ಅವರ ಜೊತೆಗೇ ನೆನಪಾಗುವ ಸಿನಿಮಾ ‘ಆ ದಿನಗಳು’. ಅವರ ನಿರ್ದೇಶನದ ‘ಸೂರ್ಯಕಾಂತಿ’, ‘ಪರಾರಿ’ ಚಿತ್ರಗಳು ಕೂಡ ಬೇರೆ ಬೇರೆ ಕಾರಣಗಳಿಗಾಗಿ ಗಮನಸೆಳೆದಿದ್ದವು. ‘ಆಟಗಾರ’ ಸಿನಿಮಾ ಗೆಲುವು ಸಾಧಿಸುವ ಮೂಲಕ ನಿರ್ದೇಶಕರಾಗಿ ಚೈತನ್ಯರ ಆತ್ಮವಿಶ್ವಾಸ ಹೆಚ್ಚಿಸಿದ ಸಿನಿಮಾ. ಆ ಸಾಲಿಗೆ ಸೇರಲು ಇದೀಗ ‘ಆಕೆ’ ತವಕಿಸುತ್ತಿದೆ.

ಕನ್ನಡ ಚಿತ್ರರಂಗದಲ್ಲಿ ಸಾಹಿತ್ಯದ ಸಂವೇದನೆಯುಳ್ಳ ಕೆಲವೇ ಕೆಲವು ನಿರ್ದೇಶಕರಲ್ಲಿ ಚೈತನ್ಯ ಕೂಡ ಒಬ್ಬರು. ಅವರು ಇದೇ ಮೊದಲ ಬಾರಿಗೆ ರೀಮೇಕ್ ಚಿತ್ರವೊಂದರ ಭಾಗವಾಗಿದ್ದಾರೆ; ತೆಲುಗಿನ ‘ಮಾಯಾ’ ಸಿನಿಮಾವನ್ನು ‘ಆಕೆ’ಯಾಗಿಸಿದ್ದಾರೆ. ಚೈತನ್ಯರ ಹಿಂದಿನ ಸಿನಿಮಾಗಳ ಕಾರಣದಿಂದಾಗಿ ಪ್ರಸಕ್ತ ರೀಮೇಕ್ ಕಥನ ಕೂಡ ಸಹೃದಯರಲ್ಲಿ ನಿರೀಕ್ಷೆಗಳನ್ನು ಹುಟ್ಟಿಸಿದೆ. ವಿದೇಶಿ ತಂತ್ರಜ್ಞರ ಪಾಲ್ಗೊಳ್ಳುವಿಕೆ ಚಿತ್ರದ ಗುಣಮಟ್ಟದ ಬಗ್ಗೆ ಕುತೂಹಲಕ್ಕೆ ಕಾರಣವಾಗಿದೆ. ಇಂಗ್ಲೆಂಡ್ನಲ್ಲಿನ ಚಿತ್ರೀಕರಣವನ್ನು ಇಯಾನ್ ಹೌಸ್ ನಿರ್ವಹಿಸಿದ್ದರೆ, ಕರ್ನಾಟಕದಲ್ಲಿನ ಶೂಟಿಂಗ್ಗೆ ಮನೋಹರ್ ಜೋಷಿ ಕ್ಯಾಮೆರಾ ಹಿಡಿದಿದ್ದಾರೆ. ಪಾಲ್ ಬರ್ನ್ಸ್ ಕಲಾ ನಿರ್ದೇಶನ ಚಿತ್ರಕ್ಕಿದೆ. ಸಂಗೀತ ಗುರುಕಿರಣ್ ಅವರದು.

ಅಂದ ಹಾಗೆ, ‘ಆಕೆ’ಯ ಕಥೆಯೇನು? ಅದನ್ನು ಹೇಳಲಿಕ್ಕೆ ಲೋಕ ಪರ್ಯಟನೆಯನ್ನೇ ಮಾಡಬೇಕು. ಏಕೆಂದರೆ, ಕಥಾ ನಾಯಕಿಯ ಪಾತ್ರ ಕರ್ನಾಟಕದಿಂದ ಇಂಗ್ಲೆಂಡ್ವರೆಗೆ ಹಬ್ಬಿಕೊಂಡಿದೆ. ಜನ್ಮಾಂತರದ ಕಥನವೂ ಜೊತೆಗಿದೆ. ಯುವ ತಾಯಿಯೊಬ್ಬಳ ತವಕತಲ್ಲಣಗಳ ಜೊತೆಗೆ ಭೂತಚೇಷ್ಟೆಯ ಕತ್ತಲೆ ಬೆಳಕಿನಾಟವೂ ಚಿತ್ರದಲ್ಲಿದೆ. ಚಿರಂಜೀವಿ ಸರ್ಜಾ ಚಿತ್ರದ ನಾಯಕ. ಹಾರರ್ ಸಿನಿಮಾಗಳು ಅವರ ಪಾಲಿಗೆ ಹೊಸದಲ್ಲ. ಆದರೂ, ‘ಆಕೆ’ ಅವರಿಗೆ ವಿಶಿಷ್ಟ ಅನುಭವ ನೀಡಿದ್ದಾಳೆ. ಚೈತನ್ಯ ಅವರೊಂದಿಗಿನ ಸಹಚರ್ಯ ನಟನೆಯ ಕೆಲವು ಸೂಕ್ಷ್ಮಗಳನ್ನೂ ಕಲಿಸಿದೆಯಂತೆ. ‘ಈ ಸಿನಿಮಾದ ಮೂಲಕ ನಟನಾಗಿ ಒಂದಿಷ್ಟು ಬೆಳೆದಿದ್ದೇನೆ’ ಎನ್ನುವ ವಿನಯದ ಮಾತು ಅವರದು. ಪ್ರಕಾಶ್ ಬೆಳವಾಡಿ ಹಾಗೂ ಅಚ್ಯುತಕುಮಾರ್ ತಾರಾಗಣದಲ್ಲಿರುವ ಪ್ರಮುಖರು.

‘ಇದು ನಿಧಾನಕ್ಕೆ ನಮ್ಮನ್ನು ತಲ್ಲಣಕ್ಕೆ ದೂಡುವ ಸಿನಿಮಾ’ ಎನ್ನುವುದು ‘ಆಕೆ’ಯ ಬಗ್ಗೆ ಗುರುಕಿರಣ್‌ರ ಬಣ್ಣನೆ. ಜೂನ್ 30ರಂದು ಚಿತ್ರ ತೆರೆ ಕಾಣುತ್ತಿದೆ.

■ ರಘು